ಶ್ರೀಮತಿ ಕೆ. ಎಸ್. ನಾಗರತ್ನಮ್ಮ —ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾ ಈ ಘಟನೆಯ ಸಂದರ್ಭದಲ್ಲಿ ಸತ್ತ ಕುಟುಂಬಗಳಿಗೆ ಪರಿಹಾರವನ್ನು ಕೊಡುವ ವಿಚಾರದ ಬಗ್ಗೆ ಉತ್ತರವನ್ನು ಕೊಟ್ಟಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಪ್ರಜಾವಾಣಿ ಪತ್ರಿಕೆಯವರು ಎಷ್ಟು ಹಣವನ್ನು ಕೊಟ್ಟಿರುತ್ತಾರೆ, ನೀವು ಎಷ್ಟು ಹಣವನ್ನು ಕೊಟ್ಟಿರುತ್ತೀರಿ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿಲ್ಲ.

ಶ್ರೀ ಬಿ. ರಾಚಯ್ಯ.—ಪರಿಹಾರವನ್ನು ಕೊಟ್ಟಿದ್ದೇವೆ. ಉತ್ತರ ಇದೆ. ಡಿಟೇಲ್ಸ್ ಓದ ಬೇಕೆಂದರೆ ಓದುತ್ತೇನೆ.

ಮೂರು ವರ್ಷಗಳಿಂದ ಹೆಚ್ಚಾಗಿ ವರ್ಗಾವಣೆಯಾಗದ ಆರಕ್ಷಕ ಅಧೀಕ್ಷಕರುಗಳು

೪೪೪ (೬೬) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಒಂದೇ ಸ್ಥಳದಲ್ಲಿ ಮೂರು ವರ್ಷಕ್ಕಿಂತ ಹೆಚ್ಚಾಗಿ ಸೇವೆ ಸಲ್ಲಿಸಿದ್ದರೂ ವರ್ಗಾವಣೆಯಾಗದೆ ಇರುವ ಪೋಲೀಸ್ ಸೂಪರಿಂಟೆಂಡೆಂಟರುಗಳ ಸಂಖ್ಯೆ ಎಷ್ಟು ?

ಆ) ಅದಕ್ಕೆ ಕಾರಣವೇನು ?

ಇ) ದೂರುಗಳು ಬಂದಿರುವ ಪೋಲೀಸ್ ಸೂಪರಿಂಟೆಂಡೆಂಟರುಗಳ ಬಗ್ಗೆ ತೆಗೆದುಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಮೂರು.

ಆ) ಆಡಳಿತಾತ್ಮಕ ಕಾರಣಗಳಿಂದ ಹಾಗೂ ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ವರ್ಗಾಯಿಸಿಲ್ಲ.

ಇ) ಒಬ್ಬ ಪೋಲೀಸ್ ಸೂಪರಿಂಟೆಂಡೆಂಟ್‌ರವರ ಬಗ್ಗೆ ಮಾತ್ರ ದೂರು ಬಂದಿದ್ದು ವಿಚಾರಣೆ ನಡೆಸಿದ ನಂತರ ಈ ದೂರು ಸತ್ಯಕ್ಕೆ ದೂರವಾದುದೆಂದು ತಿಳಿದು ಬಂದಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಯಾವ ಸೂಪರಿಂಟೆಂಡೆಂಟ್ ಮೇಲೂ ದೂರು ಬಂದಿಲ್ಲ, ಒಬ್ಬರ ಮೇಲೆ ಮಾತ್ರ ಬಂದಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿರುತ್ತಾರೆ. ಅವರು ಯಾರೆಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಚಿತ್ರದುರ್ಗ ಜಿಲ್ಲೆ ಪೋಲೀಸ್ ಸೂಪರಿಂಟೆಂಡೆಂಟ್ ಮೇಲೆ ಬಂದಿತ್ತು. ಅವರು ದಲಿತ ವರ್ಗದವರ ಮೇಲೆ ಹೆಚ್ಚಿನ ಸಹಾನುಭೂತಿಯನ್ನು ಹೊಂದಿಲ್ಲ ಎನ್ನುವ ರೀತಿಯಲ್ಲಿ ದೂರು ಬಂದಿತ್ತು. ಅದನ್ನು ವಿಚಾರ ಮಾಡಲಾಗಿ ಅದು ಸತ್ಯಕ್ಕೆ ದೂರವಾಗಿತ್ತು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಧಾರವಾಡ ಪೋಲೀಸ್ ಸೂಪರಿಂಟೆಂಡೆಂಟ್ ಬಗ್ಗೆ ದಿನಾಂಕ ೧೦-೩-೮೪ ರಂದು ಜಮೀನು ವಿಚಾರದ ಬಗ್ಗೆ ಎಲ್ಲ ಹರಿಜನರು ಅಪ್ಲಿಕೇಷನ್ ಕೊಟ್ಟಿದ್ದರು. ಅದರ ಬಗ್ಗೆ ಇಲ್ಲಿಯವರೆಗೂ ತೀರ್ಮಾನವಾಗಿಲ್ಲ. ತಮಗೂ ಮತ್ತು ಮುಖ್ಯ ಮಂತ್ರಿಗಳಿಗೂ ಅಪ್ಲಿಕೇಷನ್ ಕೊಟ್ಟಿದ್ದರು. ಅದರ ಬಗ್ಗೆ ಉತ್ತರವನ್ನು ಕೊಡಬೇಕೆಂದರೆ ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಇಲ್ಲಿಗೆ ಅವರು ಬಂದು ೩ ವರ್ಷದ ಮೇಲೆ ಆಗಿಲ್ಲ. ಒಂದು ವರ್ಷವಾಗಿದೆ ಅಷ್ಟೆ. ೩ ವರ್ಷ ಆಗಿರುವುದು ಯಾರ್ಯಾರು ಬಂದು ಎಂದು ಕೇಳಿರುವುದರಿಂದ ಈ ವಿಷಯ ಪ್ರಸ್ತಾಪಕ್ಕೆ ಬರಲಿಲ್ಲ, ಈ ವಿಷಯವನ್ನು ಪ್ರತ್ಯೇಕವಾಗಿ ಕೇಳಬಹುದು.

ಶ್ರೀ ಕೆ.ಹೆಚ್. ಪಾಟೀಲ್.—ಅವರಿಗೆ ಕೆಟ್ಟದ್ದು ಮಾಡಿ ಎಂದಂ ಹೇಳುವುದಿಲ್ಲ. ಆ ಪೋಲೀಸ್ ಇನ್ಸ್‌ಪೆಕ್ಟರ್ ಮೆ ಲೆ ಏನೂ ಕ್ರಮ ಕೈಗೊಳ್ಳದೆ ಹರಿಜನರ ಜಮೀನು ಎತ್ತಿ ಹಾಕಲಿಕ್ಕೆ ಸಾಮೀಲಾಗಿರುವವರ ಬಗ್ಗೆ ತನಿಖೆ ಮಾಡಿ ಎಂದು ಇವತ್ತಾದರೂ ಟೆಲಿಫೋನ್ ಮೂಲಕ ಸೂಚನೆ ನೀಡುತ್ತೀರಾ ? ಶಿರಹಟ್ಟಿ ತಾಲ್ಲೂಕಿನ ಪರಸಾಪುರ ಗ್ರಾಮದ ಜನ ಅಸೆಂಬ್ಲಿಗೂ ಅಪ್ಲಿಕೇಷನ್ ಕೊಟ್ಟಿದ್ದಾರೆ. ರೆವಿನ್ಯೂ ಖಾತೆಯಿಂದ ೨ ತಿಂಗಳೊಳಗೆ ವಿಲೇವಾರಿ ಮಾಡಬೇಕೆಂದು ಆಜ್ಞೆ ಮಾಡಿದ್ದಾರೆ.

ಶ್ರೀ ಬಿ. ರಾಚಯ್ಯ.—ನನಗೆ ಬಂದಂತಹ ಆರ್ಜಿ ಜಮೀನಿನ ವ್ಯಾಜ್ಯಕ್ಕೆ ಸಂಬಂಧಪಟ್ಟಿರುವುದರಿಂದ ಅದರಿಂದ ಉತ್ತರ ತರಿಸಿಕೊಂಡು ಅದು ಯಾರಿಗೆ ಸೇರಬೇಕಾಗಿದೆ ಅವರಿಗೆ ರಕ್ಷಣೆ ಕೊಡಬೇಕೆಂದು ತಿಳಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ರಕ್ಷಣೆ ವಿಷಯ ಆಲ್ಲ. ಅದು ಏನೇ ಇರಲಿ. ನಾನು ಕೇಳುವುದು ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್ ಕೋರ್ಟಿನಲ್ಲಿ ಸುಳ್ಳು ರಿಪೋರ್ಟನ್ನು ಮಾಡಿದ್ದಾನೆಂದ ಮೇಲೆ ಅವನ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇಡವೆ? ಸಾಕ್ಷಿ ತೆಗೆದುಕೊಂಡಿದ್ದೇವೆಂದು ಹೇಳಿರುವ ವ್ಯಕ್ತಿ ಸತ್ತು 2 ವರ್ಷ ವಾಗಿದೆ. ಅಂಥ ಸುಳ್ಳು ರಿಪೋರ್ಟ್‌ನ್ನು ಕೋರ್ಟಿಗೆ ಕಳುಹಿಸಿದ್ದಾರೆ. ಇಂಥ ಅಧಿಕಾರಿಗಳನ್ನು ಏತಕ್ಕೆ ಇಟ್ಟಿದ್ದೀರಿ.

ಶ್ರೀ ಬಿ. ರಾಚಯ್ಯ.—ಈ ವಿಷಯದಲ್ಲಿ ಫೋನ್ ಮಾಡಿ ಎಂದು ಹೇಳಿದ್ದಾರೆ. ಫೋನ್ ಮಾಡಿ ವಿಷಯ ತಿಳಿದುಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—

ಅಧ್ಯಕ್ಷರು.—ನೀವು ಬೇರೆ ಪ್ರಶ್ನೆ ಹಾಕಿ ಅವಕಾಶ ಕೊಡುತ್ತೇನೆ.

ಶ್ರೀ ಆರ್.ಎನ್. ನಾಯಕ್.—ಹಾಕುತ್ತೇನೆ, ಗೊತ್ತಿದೆ, ತಾವು ಹಾಗೆ ಮಾಡಿದರೆ ಹೇಗಾಗುತ್ತದೆ

ಅಧ್ಯಕ್ಷರು.—ಒಂದು ಗಂಟೆಯಲ್ಲಿ ಎಲ್ಲಾ ಪ್ರಶ್ನೆಗಳು ಮುಗಿಯಬೇಕು ಲ್ಯಾಪ್ಸ್ ಮಾಡುವುದು ಸರಿಯಲ್ಲ. ಪ್ರಶ್ನೆಹಾಕಿದವರಿಗೆ 2-3 ಸಾರಿ ಅವಕಾಶ ಕೊಡುತ್ತೇನೆ. ಬೇರೆಯವರಿಗೆ ಕೊಡುವುದು ಸಾಧ್ಯವಿಲ್ಲ. ನಾನು ಏನು ಇಲ್ಲಿ ಕುಳಿತು ಮಾಡಿದರೂ ಆದು ಸದಸ್ಯರ ಸಲುವಾಗಿಯೇ ಹೊರತು ಬೇರೆ ಆಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ಮಾನ್ಯತೆ ಬಗ್ಗೆ

ಳಿಃ(೨೭೨) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಸಾರಿಗೆ, ಸಣ್ಣ ನೀರಾವರಿ ಮತ್ತು ಬಂದರು ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಮಿಕ ಸಂಘಗಳ ಮಾನ್ಯತೆ ಪ್ರಶ್ನೆಯನ್ನು ರಹಸ್ಯ ಮತ ದಾನದ ಮೂಲಕ ಇತ್ಯರ್ಥ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಿಂದಿನ ಸಾರಿಗೆ ಮಂತ್ರಿಗಳು ವಿಧಾನ ಸಭೆಯಲ್ಲೂ ಮತ್ತು ಹೊರಗಡೆಯೂ ಆಶ್ವಾಸನೆ ಇತ್ತಿರುವುದು ನಿಜವಲ್ಲವೇ ?

ಆ) ಈ ಆಶ್ವಾಸನೆ ಇನ್ನೂ ಜಾರಿಗೆ ಬಂದಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಸರ್ಕಾರ ಇತ್ತಿರುವ ಆಶ್ವಾಸನೆಯನ್ನು ಜಾರಿ ಮಾಡಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ವೀರಣ್ಣ (ಸಾರಿಗೆ ಸಣ್ಣ ನೀರಾವರಿ ಮತ್ತು ಬಂದರು ಖಾತೆ ಮಂತ್ರಿಗಳು).—

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಮಿಕ ಸಂಘಗಳ ಮಾನ್ಯತೆ ಪ್ರಶ್ನೆಯನ್ನು ರಹಸ್ಯ ಮತ ದಾನದ ಮೂಲಕ ಇತ್ಯರ್ಥ ಮಾಡುವ ಬಗ್ಗೆ ಮಾನ್ಯ ಸಾರಿಗೆ ಸಚಿವರು ಪರಿಶೀಲಿಸುವುದಾಗಿ ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಿರುತ್ತಾರೆ.

ಆ) ಬಂದಿದೆ.

ಇ) ಕಾರ್ಮಿಕ ಸಂಘಗಳನ್ನು ಶಾಸನ ಬದ್ಧವಾಗಿ ಗುರುತಿಸಿ ಮಾನ್ಯತೆ ನೀಡುವ ಕ್ರಮ ಕೇಂದ್ರದಲ್ಲಿ ಯಾಗಲೀ ಅಥವಾ ರಾಜ್ಯಮಟ್ಟದಲ್ಲಿ ಯಾಗಲೀ ಜಾರಿಯಲ್ಲಿಲ್ಲ. ಔದ್ಯೋಗಿಕ ವಿವಾದಗಳ ನಿಯಮಗಳು ತ್ರಿಪಕ್ಷೀಯ ಒಡಂಬಡಿಕೆಗಳು. ಕಾರ್ಮಿಕ ಸಂಘಗಳನ್ನು ಗುರುತಿಸುವ ಬಗೆಗೆ ಕೆಲವಾರು ಮಾರ್ಗದರ್ಶನಗಳನ್ನು ನೀಡುತ್ತವೆಯಾದರೂ ಖಚಿತವಾದ ಅಧಿಕಾರವನ್ನು ಯಾವುದೇ ಪ್ರಾಧಿಕಾರಕ್ಕೂ ನೀಡುತ್ತಿಲ್ಲ. ಹೀಗಾಗಿ ಕಾರ್ಮಿಕ ಸಂಘಗಳನ್ನು ಗುರುತಿಸಿ ಮಾನ್ಯತೆ ನೀಡುವ ವಿಷಯವನ್ನು ಸಮಗ್ರವಾಗಿ ಆಲೋಚಿಸಬೇಕಾಗುತ್ತದೆ. ಚುನಾವಣಾಧಿಕಾರಿಗಳ ನೇರ ತೀರ್ಮಾನದ (ರೆಫರಂಡಂ) ಮೂಲಕ ಅಥವಾ ಗುಪ್ತ ಮತದಾನ ಪದ್ಧತಿಯ ಮುಖಾಂತರ ಆತ್ಯಧಿಕ ಕಾರ್ಮಿಕರ ಬೆಂಬಲ ಪಡೆಯುವ ಒಂದು ಸಂಘಕ್ಕೆ ಕೇಂದ್ರಮಟ್ಟದಲ್ಲಿ ಮಾನ್ಯತೆ ನೀಡುವುದು ಪ್ರತಿಯೊಂದು ವಿಭಾಗದಲ್ಲಿಯೂ ಅಧಿಕ ಕಾರ್ಮಿಕ